ನಾರಾಯಣಪುರ ಬಲದಂಡೆ ಯೋಜನೆ ಅದು ಎರಡನೇ ಹಂತದಲ್ಲಿದೆ. ಅದು ಸುಮಾರು 95 ಕಿಲೋಮಿಟರ್ ಉದ್ದವಿದ್ದು ಸುಮಾರು 84 ಸಾವಿರ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗುವುದು. ಇದು ನಾರಾಯಣಪುರ ಡ್ಯಾಮ್‌ನಿಂದ 27 ಕಿಲೋಮಿಟರ್‌ರವರೆಗೆ ಷೋರಬ್ ಆಫ್ ತಮನ್‌ಕಲ್ ಅದು ಅಂದರೆ ಗ್ರಾಂಡ್ ಪವರ್‌ಹೌಸ್‌ಗೆ ಹೋಗಬೇಕೆಂದು ನಿರ್ಣಯ ಮಾಡಿದೆ. ಈ ಇರಿಗೇಷನ್ ಕ್ಯಾನಲ್ ಫೋರೆಬೆಯಿಂದ ತಮನ್‌ಕಲ್ ಅಂಡರ್‌ಗ್ರೌಂಡ್ ಪವರ್‌ಹೌಸ್‌ನಿಂದ 27 ಕಿಲೋಮಿಟರ್‌ವರೆಗೆ ಇದೆ. ಇದರ ಉದ್ದೇಶವೇನೆಂದು ಸುಮಾರು ಅಲ್ಲಿಯವರೆಗೆ ಕಾಲುವೆ 25 ಕಿಲೋಮಿಟರ್ ಮಾಡಿದರೆ ಸುಮಾರು 12 ಸಾವಿರ ಹೆಕ್ಟೇರ್ ಹೆಡ್‌ವರ್ಕ್ ನಾರಾಯಣಪುರ ಹೆಡ್ ವರ್ಕ್‌ನಿಂದ ಷೆರಬ್ ತಮನ್‌ಕಲ್ ಪವರ್‌ಹೌಸ್‌ನವರೆಗೆ ಅದನ್ನು ಬೇಬಿಕೆನಾಲ್ ಎಂದು ಹೇಳುತ್ತಾರೆ. ಆ ಪ್ರಕಾರ ಅದನ್ನು ಮಾಡಿದರೆ ಸುಮಾರು 27 ಕಿಲೋಮಿಟರ್‌ನಿಂದ 95 ಕಿ.ಮಿ.ರವರೆಗೆ ಸುಮಾರು 72 ಸಾವಿರ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡುತ್ತದೆ. ಈ ಒಂದು ಸರ್ವೆಕೆಲಸ ಮಾಡಲಿಕ್ಕೆ 27 ಕಿ.ಮಿ.ಗೆ ಮೆಸರ್ಸ್ ಕನ್‌ಸೆಲ್ಟಿಂಗ್ ಇಂಜಿನಿಯರಿಂಗ್ ಸರ್ವೀಸ್ ನ್ಯೂಡೆಲ್ಲಿ ಎಂದು ಹೇಳಿ ಅವರಿಗೆ ಈಗಾಗಲೇ ಅದರ ಒಂದು ಸರ್ವೆ ಕೆಲಸವನ್ನು ಕೊಡಲಾಗಿದೆ. ಸರ್ವೆ ಕೆಲಸ 0 ಕಿಲೋಮಿಟರ್‌ನಿಂದ ಅಂದರೆ ನಾರಾಯಣಪುರ ಡ್ಯಾಂನಿಂದ 27 ಕಿಲೋಮಿಟರ್ ರವರೆಗೆ, ಅದು ಕೂಡಲೇ ಪ್ರಾರಂಭವಾಗಿ 2-3 ವರ್ಷದಲ್ಲಿ ಪೂರ್ತಿ ಮಾಡಲಿಕ್ಕೆ ಸಾಧ್ಯ ಆಗುತ್ತದೆ. ಅದರ ಒಟ್ಟು ಎಸ್ಟಿಮೇಟೆಡ್ ಕಾಸ್ಟ್ 95 ಕಿಲೋಮಿಟರ್‌ರವರೆಗೆ 208 ಕೋಟಿ ರೂಪಾಯಿ ಇರುತ್ತದೆ. ಬೇಬಿ ಕೆನಾಲ್ ಕಾಸ್ಟ್ 0 ಇಂದ 27 ಕಿಲೋಮಿಟರ್‌ರವರೆಗೆ 30 ಕೋಟಿ ಆಗುತ್ತದೆ. ಆ ವರದಿ ಎಲ್ಲಾ ತರಿಸಿದ ಮೇಲೆ ನಾವು ಈ ಬೇಬಿ ಕೆನಾಲ್ ಮಾಡಬೇಕಾದರೆ ಈ ವರ್ಷಕ್ಕೆ 5 ಕೋಟಿ ರೂಪಾಯಿ ಇದೆ. ನಾನು ಹೆಚ್ಚುವರಿ ಹಣ ಉಪಯೋಗ ಮಾಡಿಕೊಂಡು ಬೇಬಿ ಕೆನಾಲ್ ವರ್ಕ್‌ನ್ನು ಸರ್ವೆ ವರದಿ ಬಂದ ಕೂಡಲೇ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮುಖ್ಯಮಂತ್ರಿಗಳು ಕೆಲವೊಂದು ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂಬ ಆಶ್ವಾಸನೆ ಕೊಟ್ಟಿದ್ದರು. ನೀವು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಕೆಲವು ಕ್ಷೇತ್ರದಲ್ಲಿ 2 ಲಕ್ಷ ರೂಪಾಯಿ ಕೆಲಸ ಕೂಡ ಸೇರಿಲ್ಲ. ನಮ್ಮ ಹತ್ತಿರ ಯಾವ ಯಾವ ಕೆಲಸ ಆಗಬೇಕೆಂದು ಕೇಳುವುದರಲ್ಲಿ ಮತ್ತು ಅದನ್ನು ಮಂಜೂರ್ಮಾಡುವ ವ್ಯವಸ್ಥೆ ನೋಡಿದರೆ, ನೀವು ಕೇಳುವುದರಲ್ಲೂ ಅರ್ಥವಿಲ್ಲ, ನಾವು ಕೊಡುವುದರಲ್ಲೂ ಅರ್ಥವಿಲ್ಲ. ಯಾವ ಆಧಾರದ ಮೇಲೆ ಈ ಪಟ್ಟಿ ತಯಾರಿಸಿದ್ದೀರೆಂಬುದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳು ಪ್ರತಿಯೊಂದು ಕ್ಷೇತ್ರಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡತ್ತೇವೆಂದು ಹೇಳಿ ಇಲ್ಲಿಯವರೆಗೆ ಸೇರಿಸಿಲ್ಲ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾವು ಹೇಳುತ್ತೇವೆ ಕುಳಿತುಕೊಳ್ಳಿ. ನೀವು ನಮಗೆ ಸಪೋರ್ಟ್ ಮಾಡುವುದಕ್ಕೆ ನಿಮ್ಮ ಕಾಲದಲ್ಲಿ ನಮಗೇನೂ 50 ಲಕ್ಷ ರೂಪಾಯಿ ಕೊಟ್ಟಿರಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಅಧಿಕಾರ ಅವರಿಗೆ ಇದೆ. ನೀವು ಏನು ಬೇಜವಾಬ್ದಾರಿಯಿಂದ ಮಾತನಾಡುತ್ತೀರಿ. ಸ್ವಲ್ಪ ಮರ್ಯಾದೆಯಿಂದ ಮಾತನಾಡಿ. ಕುಳಿತುಕೊಳ್ಳಿ ಎಂಬುದಕ್ಕೆ ನೀವು ಯಾರು? ನೀವು ಏನು ಮಾತನಾಡುತ್ತೀರಿ? ಮಾತನಾಡುವ ರೀತಿಯೇ ಇದು?

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶಟ್ಟಿ : ನಾವೂ ವಿರೋಧ ಪಕ್ಷದ ಸದಸ್ಯರಾಗಿ ಕೆಲಸ ಮಾಡಿದ್ದೇವೆ. ನಿಮಗೆ ನೈತಿಕತೆ ಆಧಾರದ ಮೇಲೆ ಮಾತನಾಡುವ ಹಕ್ಕಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಮಾತನಾಡುವುದನ್ನು, ಕೇಳುವುದಕ್ಕೆ ನೀವು ತಯಾರಿಲ್ಲ. ಈಗ 25 ಲಕ್ಷ ರೂಪಾಯಿ ಬಗ್ಗೆ ಏನು ಹೇಳಿದ್ದೀರಿ ಅದಕ್ಕೆ ಅಲಾಯಿದ ಪಟ್ಟಿ ಕೊಡುತ್ತೇವೆಂದರು, ಕೊಡಲಿ. ನಾವು ಪಟ್ಟಿ ತೆಗೆದು ನೋಡಿದರೆ ಯಾವುದಕ್ಕೂ ಸರ್ಕಾರದ ಗ್ರಾಂಟ್ ಇಲ್ಲ. ಲೋಕೋಪಯೋಗಿ ಇಲಾಖೆಯಿಂದ ಕೆಲಸ ಆಗುತ್ತಿಲ್ಲ. ಹಾಗಾಗಿ ಸಣ್ಣ ನೀರಾವರಿ ಇಲಾಖೆಗೆ ಮತ್ತು ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣ ಕೊಡಿ. ಏಕೆಂದರೆ ಅಲ್ಲಿ ಮೂರನೇ ಒಂದು ಭಾಗ ಕೂಡ ಗ್ರಾಂಟ್ ಕೊಟ್ಟಿಲ್ಲ. ಒಂದಕ್ಕೊಂದು ಸಂಬಂಧ ಇಲ್ಲ. ನೀವು ಮಾಡಲಿಲ್ಲವೆಂದರೆ ನನಗೆ ಬೇಜಾರಿಲ್ಲ. ತಾವು ಪಟ್ಟಿ ಕೇಳಿದ್ದಿರಿ, ನಾವು ಪಟ್ಟಿ ಕೊಟ್ಟಿದ್ದೇವೆ. ನಿಮ್ಮ ಇಲಾಖೆಯಿಂದ ನನ್ನ ಕ್ಷೇತ್ರದಲ್ಲಿ ಒಂದು ಬ್ರಿಡ್ಜ್ ಇಲ್ಲ, ಒಂದು ರೋಡ್ ಇಲ್ಲ. ಅದನ್ನು ನೋಡಿ ನನಗೆ ಷಾಕ್ ಆಯಿತು. ನಾವು ಎರಡೆರಡು ಸಾರಿ ಕೇಳಿದ್ದೆವು. ನಿಮ್ಮ ಸರ್ಕಾರ ಇದೆ, ನೀವು ಅಧಿಕಾರದಲ್ಲಿದ್ದೀರಿ, ನಿಮ್ಮ ಡಿಸಿಷನ್ ಇದೆ. ಎಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕೋ ಅಲ್ಲಿ ತೆಗೆದುಕೊಳ್ಳಿ. ನನ್ನ ಕ್ಷೇತ್ರದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲವೆಂದರೆ ಏನೂ ತೊಂದರೆ ಇಲ್ಲ. ಆದರೆ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ, ಲೋಕೋಪಯೋಗಿ ಇಲಾಖೆಗೆ ಮತ್ತು ಸಣ್ಣ ನೀರಾವರಿ ಇಲಾಖೆಗೆ ಹೆಚ್ಚಿನ ಹಣ ಕೊಟ್ಟರೆ ಕೆಲಸ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಎಷ್ಟೋ ಕಡೆ ಮೂರನೇ ಒಂದು ಭಾಗ ಗ್ರಾಂಟ್ ಕೊಟ್ಟಿಲ್ಲ. ಕಳೆದ ವರ್ಷ ಸ್ಪಿಲ್ ವರ್ಕ್ಸ್‌ಗೆ 5-10 ಸಾವಿರ ರೂಪಾಯಿ ಗ್ರಾಂಟ್ ಕೊಟ್ಟಿದ್ದಾರೆ. ಇದು ಸರಿಯಲ್ಲ. ಹಾಗಾಗಿ ಅದನ್ನು ತಾವು ಪರಿಶೀಲನೆ ಮಾಡಿ ಎಲ್ಲಾ ಶಾಸಕರಿಗೆ ಕೊನೇಪಕ್ಷ ಮಿನಿಮಂ ಕೆಲಸ ಬರುವ ಹಾಗೆ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಭಾಪತಿಗಳೇ, ನಾನು ಆಯವ್ಯಯ ಮಂಡನೆ ಮಾಡುವಾಗ ಏನು ಹೇಳಿದ್ದೇನೆಂದರೆ ಇದಕ್ಕೆ ಸಂಪೂರ್ಣವಾದ ಮಾಹಿತಿಗಳು ಮಾನ್ಯ ಸದಸ್ಯರಿಂದ ಬರುವಾಗ ತಡವಾಗಿ, ಸರಿಯಾದ ವ್ಯವಸ್ಥೆ ಆಗಲಿಲ್ಲ. ಅದಕ್ಕೆ ಪ್ರತ್ಯೇಕವಾಗಿ ನಾವು ಅನ್‌ಸ್ಟಾರ್ 1-2 ಎಂದು ಅಧಿವೇಶನ ಮುಗಿಯುವುದರೊಳಗೆ ಕೊಡುತ್ತೇವೆಂದು ಮಾತು ಕೊಟ್ಟಿದ್ದೆ. ಆ ಮಾತಿನ ಪ್ರಕಾರ ಇವತ್ತು ಪಟ್ಟಿ